


### ಶಬರಿಮಲೆ ಇಷ್ಟವಾಯಿತು

ಮಕರ ಹಬ್ಬದ ಶುಭ ಸಂದರ್ಭಕ್ಕೆ ಮೂಡಿಬಂದ ಪಟ್ನಂ ಅನಂತ ಪದ್ಮನಾಭ ಅವರ 'ಸ್ವಾಮಿಯೇ ಶರಣಂ' ಲೇಖನ ತುಂಬಾ ಇಷ್ಟವಾಯಿತು.

ಪಿ.ಗೋವಿಂದರಾಜ್, ಶಿವಮೊಗ್ಗ/ ಸೌದಾಮನೀ ಪ್ರಭಾಕರ, ಹಾಸನ/ ಕೆ.ಎಸ್.ರಘುನಾಥರಾವ್, ಫಲ್ಗುಣಿ

### ಮಹಿಳೆಯರ ತಾರತಮ್ಯ

ಮಹಿಳೆಯರಿಗೆ ಪ್ರವೇಶ ನಿಷೇಧಿಸಿರುವ ಶಬರಿ ಮಲೆಯಲ್ಲಿ ಸಮ ಸಮಾಜದ ಪರಿಕಲ್ಪನೆ ಇದೆ ಎಂದು ಪಿ.ಜಿ.ವಿಜು ಹೊಗಳಿರುವುದು ವಿಚಿತ್ರವಾಗಿ ಕಾಣುತ್ತದೆ! ಜಾತ್ಯತೀತ ಸ್ವರೂಪ ಇದೆ ಎಂಬ ಸರ್ಟಿಫಿಕೇಟ್ ಬೇರೆ ನೀಡಿದ್ದಾರೆ! ಚಿತ್ರನಟಿ ಜಯಮಾಲಾರಂತಹ ಪ್ರತಿಷ್ಠಿತ ವರ್ಗದ ನಟಿಯೇ ಅವಮಾನಕ್ಕೊಳಗಾದಾಗ ಸಾಮಾನ್ಯ ಮಹಿಳೆಯ ಪಾಡೇನು?

ಪಿ.ವರಲಕ್ಷ್ಮಿ, ವಿಜಯಕುಮಾರಿ, ಮೈಸೂರು/ ಎನ್.ವಿಮಲ, ಶಾಂತಕುಮಾರಿ, ಬೆಂಗಳೂರು

### ದೆವ್ವಗಳ ಬೀಡು!

ಶಬರಿಮಲೆ ತಾಣ ಭಕ್ತರ ಭಕ್ತಿಗಿಂತ ಹೆಚ್ಚಾಗಿ ಅಶಿಸ್ತು ಮತ್ತು ಕೊಳಕಿನಿಂದ ಕೂಡಿದೆ. ಹಾಗಾಗಿ ದೆವ್ವಗಳ ಬೀಡಾಗಿದೆ.

-ನರೇಂದ್ರ ಸಿರಕಜೆ, ಮೈಸೂರು

### ವಸಂತ ವನಿತೆಯರು!

'60ರ ಮಾಗಿದ ಮಾದಕ ಮಾನಿನಿಯರು'(ಫಿಟ್‌ನೆಸ್). ಕಾಲನಿಗೆ ಕೈಕೊಟ್ಟು ಮಾಗಿಯನ್ನು ಮೀರಿದ ಆ ವಸಂತ ವನಿತೆಯರು ಅಂತವನ್ನೂ ಗೆಲ್ಲಲಿದ್ದಾರೆಯೆ? ಅಂತೂ ಇತರರಿಗೆ ಅಚ್ಚರಿ ಮತ್ತು ಅಸೂಯೆ!

-ಸಿಪಿಕೆ, ಮೈಸೂರು

*ಅಬ್ಬಬ್ಬ ಮಾನಿನಿಯರೆ!*
*ದಾಟಿದರೂ ನಿಮಗೆ ಅರವತ್ತು*
*ನೀವಿನ್ನೂ ಇಪ್ಪತ್ತು*
*ನೋಡಿ ನಿಮ್ಮ ದೇಹ ಸಿರಿ*
*ನಾರಿಯರಿಗೆಲ್ಲಾ ಹೊಟ್ಟೆ ಉರಿ*

-ಮುಗುಳುವಳ್ಳಿ ಸದಾಶಿವ್, ಬಾಳೆಹೊನ್ನೂರು/ ಸಂಜಯ, ಎಚ್.ಡಿ.,ಕೋಣನಕೇರಿ

### ಗೀತಕ್ಕನ ಮಾತು ಚಂದ

76ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದ ಗೀತಾ ನಾಗಭೂಷಣರ ಸಂದರ್ಶನ (ಡಾ. ಮೀನಾಕ್ಷಿ ಬಾಳಿ) ಚಂದ ಇತ್ತು. ಆದರೆ ಅವರ ವೈಯುಕ್ತಿಕ ಜೀವನದ ಬಗ್ಗೆ ಪೂರ್ಣ ಮಾಹಿತಿ ದೊರೆಯಲಿಲ್ಲ.

-ಎಂ.ವಿ. ಶ್ರೀನಿವಾಸ, ಚನ್ನಗಿರಿ/ ಎಸ್.ಲಕ್ಷ್ಮೀನರಸಿಂಹ, ಚಾಮರಾಜನಗರ/ ಮಹಾಂತೇಶ ನವಲಕಲ್, ಗುಲ್ಬರ್ಗ/ ತರಂಗಿಣಿ, ತುಮಕೂರು

### ವಂಡರ್ ಫುಲ್!

'ವಂಡರ್ ಪುಟ'ದಲ್ಲಿನ 'ನೀಳ ಕಾಲ್ಗಳ ಚೆಲುವೆ' ಸ್ವೆಟಿನಾಳ ಚಿತ್ರ ಗಾಜಿನ ಗೊಂಬೆಯಂತೆ ಮೋಹಕವಾಗಿ ಅತ್ಯಂತ ವಂಡರ್‌ಫುಲ್ ಆಗಿತ್ತು.

-ಮೇ.ಗೋ. ಸುಬ್ಬಣ್ಣ, ಮೇಗರವಳ್ಳಿ

### ಕಾಲದ ಜತೆ 'ಸುಧಾ'

ಓದುಗರು ಕಳಿಸಿರುವ 234 ಪತ್ರಗಳಲ್ಲೊಂದನ್ನು ಲಾಟರಿ ಎತ್ತುವ ಮೂಲಕ 'ಸುಧಾ' ಹೆಸರು ಬಂದ ರೋಚಕ ಸಂಗತಿ ತಿಳಿದು ಖುಷಿಯಾಯಿತು. ಓದುಗರಿಂದ ಆಯ್ಕೆಯಾದ ಈ ಹೆಸರಿನಲ್ಲಿ ಬಲವಾದ ಶಕ್ತಿ, ಹರಕೆ, ಮಮತೆಯಿದೆ. ಆದ್ದರಿಂದ 'ಸುಧಾ'ಳು ಸದಾ ಜವ್ವನೆಯಾಗಿ ಕಂಗೊಳಿಸುತ್ತಾ, ಕಾಲನ ಓಟಕ್ಕೆ ತಕ್ಕಂತೆ ಓದುಗರ ದಾಹವನ್ನು ತಣಿಸುತ್ತಿದ್ದಾಳೆ.

ಹೊಸ ಪ್ರತಿಭೆಗಳನ್ನು ಗುರುತಿಸಿ, ಪ್ರೋತ್ಸಾಹಿಸಿ, ಹೆಮ್ಮರವಾಗಿಸಿ ಅವರಿಂದು ಪಂಪ, ನಾಡೋಜ ಪ್ರಶಸ್ತಿಗೆ ಭಾಜನರಾಗಿರುವುದು 'ಸುಧಾ'ಳ ನಿಷ್ಕಲ್ಮಶ ಮನಸ್ಸಿಗೆ ಸಾಕ್ಷಿಯಾಗಿದೆ.

-ಮಲ್ಲಿಕಾರ್ಜುನ ಗಚ್ಚಿ ಗೋಗಿ, ಶಹಾಪುರ

### ಹವ್ಯಾಸಿ ಲೇಖಕರ ಸಂಗಾತಿ!

ಅನೇಕರ ಮನಮುಟ್ಟುವ ಧಾರಾವಾಹಿ ಕಾದಂಬರಿಗಳು 'ಸುಧಾ' ಮೂಲಕ ಬೆಳಕನ್ನು ಕಂಡು ಓದುಗರಿಗೆ ಸಂತಸ ತಂದಿದೆ. ಉಷಾ ನವರತ್ನರಾಮ್ ಅವರ 'ಹೊಂಬಿಸಿಲು' ಪ್ರಕಟವಾಗುವಾಗ ನನ್ನ ಮನೆಯ ಹೆಸರನ್ನು ನಿರ್ಧರಿಸಿದ್ದೆ. ಆಗ ನಾನು ನಿವೇಶನವನ್ನು ಸಹ ಹೊಂದಿರಲಿಲ್ಲ.

ಅನೇಕ ಹವ್ಯಾಸಿ ಲೇಖಕರು ವಿವಿಧ ವಿಭಾಗಗಳಲ್ಲಿ ಬರೆಯುವುದಕ್ಕೆ 'ಸುಧಾ' ಪ್ರೇರಣೆ ನೀಡಿದೆ. ಅದರಲ್ಲಿ ನಾನೂ ಒಬ್ಬ!

-ಡಾ. ಕೆ.ಕೆ. ಜಯಚಂದ್ರ ಗುಪ್ತ, ಹಾಸನ

### 'ಸುಧಾ' ನಮ್ಮ ಹೆಮ್ಮೆ

'ಸುಧಾ'ಳಿಗೆ ಹೆಸರಿಟ್ಟ 17 ಜನರ ಪೈಕಿ ನನ್ನ ಗುರುಗಳಾದ ಬಿ.ಕೆ. ರಾಘವೇಂದ್ರರ ಸೋದರ ಸಂಬಂಧಿಯೂ ಒಬ್ಬರು. ಮತ್ತೆ ಆ ವಿಷಯ ನೆನಪಿಸಿದಾಗ ನಾವೆಲ್ಲಾ ತುಂಬಾ ಹೆಮ್ಮೆಪಟ್ಟಿದ್ದೆವು.

-ವನಜಾ ಚಂದ್ರಶೇಖರ್, ಬೆಂಗಳೂರು

### ಜ್ಞಾನ ಭಂಡಾರ 'ಸುಧಾ'

ಆಗ ನನಗೆ ಇನ್ನೂ 14 ವರ್ಷ ವಯಸ್ಸು, ಭದ್ರಾವತಿಯಲ್ಲಿ ಓದುತ್ತಿದ್ದೆ. ಮೊದಲ 'ಸುಧಾ' ಮೋಹಿನಿ ಕಳಸ ಹೊತ್ತ ಚಿತ್ರ ಇನ್ನು ಅಚ್ಚಳಿಯದೆ ನೆನಪಿದೆ. ಅಂದಿನಿಂದ ಇಂದಿನವರೆವಿಗೆ ಸತತ ಜ್ಞಾನ ಭಂಡಾರವನ್ನೇ ತಂದು ಕೊಟ್ಟಿರುವ ಒಂದೇ ಒಂದು ಕನ್ನಡ ವಾರಪತ್ರಿಕೆ 'ಸುಧಾ' ಎಂದರೆ ತಪ್ಪಾಗಲಾರದು.

ಯಾವುದೇ ಬರವಣಿಗೆಯಲ್ಲಿ ಅತಿಶಯೋಕ್ತಿ ಇರುವುದಿಲ್ಲ. ಇದು ಬರೀ ಕರ್ನಾಟಕ ಮಾತ್ರವಲ್ಲ. ನಾವು 30 ವರ್ಷ ಹೊರನಾಡಿನಲ್ಲಿದ್ದರೂ ತಪ್ಪದೆ ಓದುತ್ತಿದ್ದೆವು. (ನಾಸಿಕ್, ಮಹಾರಾಷ್ಟ್ರ). ಅಲ್ಲಿ ಪ್ರತಿಯೊಬ್ಬ ಕನ್ನಡಿಗರ ಮನೆಯ ಟಿಪಾಯ್ ಮೇಲೆ ರಾರಾಜಿಸುತ್ತಿರುವುದು ಸುಧಾ ಪತ್ರಿಕೆ. ಈ ವ್ಯವಸ್ಥೆ ಮಾಡಿದಂತ ಸಾವಿತ್ರಿ ಮತ್ತು ವೆಂಕಟೇಶ ದಂಪತಿಗಳಿಗೆ ಧನ್ಯವಾದಗಳು.

-ಪ್ರೇಮಾ ಜಯಶೇಖರ, ಬೆಂಗಳೂರು


ಶ್ರೀ ಪಂಚಮುಖಿ ಜ್ಯೋತಿಷ್ಯಂ
INDIA'S MOST POPULAR ASTROLOGER
ಪಂಡಿತ. ಶ್ರೀ ಗಣೇಶ್ ಕುಮಾರ್ ಶ್ರೀ ಶ್ರೀ ಹನುಮಾನ್ ಆರಾಧಕರು

ಕೇರಳ, ಕಲ್ಕತ್ತಾದ ಸಾವಿರಾರು ವರ್ಷಗಳ ಹಿಂದಿನ ಪ್ರಾಚೀನ ನಾಡಿಗ್ರಂಥ ಆಧಾರದಿಂದ ಸರ್ವಮಂತ್ರ ವಿದ್ಯೆ, ಜ್ಯೋತಿಷ್ಯ ಶಾಸ್ತ್ರ ಪಂಚಮಹಾಗುರುಗಳ ಬೋಧನೆಯಿಂದ ಯೋಗ ಯಜ್ಞಗಳ ಮೂಲಕ ಸರ್ವ ವಿದ್ಯೆಯನ್ನು ತಮ್ಮ ವಶದಲ್ಲಿರಿಸಿಕೊಂಡಿರುವವರು. ವಶೀಕರಣ, ಮದುವೆ, ಸಂತಾನ, ದಾಂಪತ್ಯ, ಪ್ರೇಮವಿಚಾರ, ಲೈಂಗಿಕ, ಮಾನಸಿಕ, ಗೃಹಶಾಂತಿ, ವಿದ್ಯೆ, ಆರೋಗ್ಯ, ವಿದೇಶ ಪ್ರಯಾಣ, ಹಣಕಾಸು, ವ್ಯಾಪಾರ, ಉದ್ಯೋಗ, ಕೋರ್ಟ್ ಕೇಸು, ಸಾಲಬಾಧೆ, ಮಾಟಬಾಧೆ, ಶತ್ರುಕಾಟ, ಅಲ್ಲದೆ ರಾಜಯೋಗ ವಶ ಮತ್ತು ಅಖಂಡ ಯೋಗವಶಗಳು, ಇನ್ನಿತರ ನಿಮ್ಮ ಯಾವುದೇ ಕಠಿಣ, ನಿಗೂಢ ಮತ್ತು ಗುಪ್ತ ಸಮಸ್ಯೆಗಳಿಗೆ, ಸಲಹೆ ಮತ್ತು ಪರಿಹಾರ ಶತಸಿದ್ಧ.
600 ವರ್ಷ ಹಳೆಯ ಪಂಚಸಿದ್ಧಿ ತಂತ್ರಗಳಿಂದ ನಿಮ್ಮ ದುಶ್ಚಟ, ದೀರ್ಘಾವಧಿ, ಲೈಂಗಿಕ, ಸಂತಾನ, ಸಮಸ್ಯೆಗಳಿಗೆ ಸನಾತನ ಪ್ರಕ್ರಿಯೆಗಳಿಂದ ಅತೀ ಶೀಘ್ರದಲ್ಲಿ ಸಮಗ್ರ ಪರಿಹಾರ ಕಲ್ಪಿಸುತ್ತಿರುವವರು.
ವಿ.ಸೂ.: ಇಲ್ಲಿ ಹೇಳುವ ವಿಷಯಗಳೆಲ್ಲವೂ ಗುಪ್ತವಾಗಿರುವುದರಿಂದ ನಿಮ್ಮ ಯಾವುದೇ ಸಮಸ್ಯೆಗಳನ್ನು ಹೇಳಲು ಹಿಂಜರಿಯಬೇಕಾಗಿಲ್ಲ. ದೂರವಾಣಿ ಹಾಗೂ ಪತ್ರದ ಮೂಲಕ ವಿವರಗಳನ್ನು ಪಡೆಯಬಹುದು.
ಬೆಂಗಳೂರು ಖಾಯಂ ಮನೆ ವಿಳಾಸ ನಂ.167/3, ಮೊದಲನೇ ಮಹಡಿ, 1ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಮುತ್ತುರಾಯಸ್ವಾಮಿ ದೇವಸ್ಥಾನದ ಹತ್ತಿರ, ಮೈಸೂರು ಸರ್ಕಲ್, (ಸಿರಸಿ ವೃತ್ತ), ಚಾಮರಾಜಪೇಟೆ, ಬೆಂಗಳೂರು-560 018.
ಮೈಸೂರು ಖಾಯಂ ಮನೆ ವಿಳಾಸ ಶ್ರೀ ಚಕ್ರ ಜ್ಯೋತಿಷ್ಯಾಲಯ ಪಂಡಿತ್ ಶ್ರೀ ಸಂತೋಷ್‌ಕುಮಾರ್ ನಂ.89/49, ವಿಜಯನಗರ 2ನೇ ಫೇಸ್, 4ನೇ ಸ್ಟೇಜ್, ಹುಣಸೂರು ರಸ್ತೆ, ಯಶಸ್ವಿನಿ ಕಲ್ಯಾಣ ಮಂಟಪ ಮತ್ತು ಎಸ್.ಆರ್.ಎಸ್. ಗೇಟ್ ಹತ್ತಿರ, ಹೂಟಗಳ್ಳಿ, ಮೈಸೂರು-18.
9880444450 9845899127